ಅವರಿಬ್ಬರೂ ಪರಸ್ಪರ ಮುಖ ನೋಡಿಕೊಂಡರು. ಆ ವ್ಯಕ್ತಿ ಕೇಳಿದ್ದ ಪ್ರಶ್ನೆ ಅವರಿಗೆ ಅರ್ಥವಾಗಿರಲಿಲ್ಲ.

''ಯಾಕೆ... ಮಕ್ಕಳು ಮಾತಾಡ್ತಾ ಇಲ್ವಲ್ಲ?...'' ಆತ ಮುಂದುವರಿಸಿದ.

''ಯಾವ ತರಹದ ಫೋಟೊ ಬೇಕು ನಿಮಗೆ?...''

ಅವರು ಚೀಲದಿಂದ ಬೌಂಡ್‌ಬುಕ್ ತೆಗೆದು ಅದರಲ್ಲಿ ಸತೀಶ ಮತ್ತು ಸ್ವಪ್ನಾ ಇರುವ ಫೋಟೊವನ್ನು ಮುಟ್ಟಿ ತೋರಿಸಿದರು. ಆತ ಆಗ ಇಡೀ ಮುಖ ಅರಳಿಸಿ ದೊಡ್ಡ ನಗುವನ್ನು ಹೊರಹಾಕಿದ.

ಮಕ್ಕಳು ಅಲ್ಲಿದ್ದ ಬೆಂಚಿನ ಮೇಲೆ ಕುಳಿತರು. ಅವರ ಹಿಂದೆ ನಕ್ಷತ್ರಗಳು, ಪೂರ್ಣಚಂದ್ರನಿರುವ ಒಂದು ಪರದೆಯಿತ್ತು. ಆತ ಮಕ್ಕಳಿಬ್ಬರ ತಲೆ, ಗದ್ದಗಳನ್ನು ಹಲವಾರು ಸಲ ಆಚೀಚೆ ಮಾಡಿ ನೆಟ್ಟಗೆ ಸರಿಮಾಡಿದ. ಅನಂತರ ಹಿಂದಕ್ಕೆ ಹೋಗಿ ಕ್ಯಾಮರಾದೊಳಗಿನಿಂದ ಅವರನ್ನು ನೋಡಿ

